ಕಥೆಗಳು ಮನುಷ್ಯತ್ವವನ್ನು ಹುಡುಕುತ್ತವೆ; ಸಂಬಂಧಗಳ ಬಿರುಕುಗಳನ್ನು ಮತ್ತೆ ಜೋಡಿಸುವ ಆಶಾವಾದವನ್ನು ವ್ಯಕ್ತಪಡಿಸುತ್ತವೆ. ಬದುಕನ್ನು ತೀವ್ರವಾಗಿ ಅನುಭವಿಸುವ ಪಾತ್ರಗಳು ಇವರಲ್ಲಿ ಬರುತ್ತವೆ. 'ಚೇಳುಕಚ್ಚಿದ ಗಾಯ' ಒಂದೇ ಕುಟುಂಬದ ಕಥೆಯಾದರೂ, ಅಲ್ಲಿನ ಕೆಲ ಮನುಷ್ಯರು ಆರಂಭದಲ್ಲಿ ತಮ್ಮ ಅಂತರಂಗಗಳನ್ನು ಸುಟ್ಟುಕೊಂಡಿದ್ದಾರೆ; ವಾಸ್ತವ ಬದುಕಿನಿಂದ ಹೊರಬಂದಂತೆ ಕಾಣುತ್ತಾರೆ. ಆದರೆ, ಚೇಳು ಮತ್ತು ಮಗು ಇಲ್ಲಿ ಅವರನ್ನು ಮತ್ತೆ ಪ್ರೀತಿಯ ಚೌಕಟ್ಟಿಗೆ ತರಬಲ್ಲ ಅಂತರಂಗದ ಶಕ್ತಿಗಳು. ಮಗುವನ್ನು ಚೇಳು ಕಚ್ಚಿದರೂ, ಅದೊಂದು ರೂಪಕ. ಮಗುವಿನ ಮುಗ್ಧತೆ ದೊಡ್ಡವರನ್ನು ಒಂದುಗೂಡಿಸಿದೆ. ಸಂಬಂಧಗಳ ಮೂಲಕ ಕಾಣ್ಕೆಯನ್ನು ಹುಡುಕುವ ದಾರಿ ಇವರದು. 'ಪೊಕ್ಕ ಹರಿಶ್ಚಂದ್ರ' ಕಥೆಯಲ್ಲಿ ಎರಡು ಹೆಣ್ಣು ಜೀವಗಳು ಬದುಕಿನ ಪ್ರಾಮಾಣಿಕತೆಯನ್ನು ಅರ್ಥಮಾಡಿಕೊಂಡಷ್ಟು, ನಂತರದ ತಲೆಮಾರು ಅದನ್ನು ಸಾಧಿಸುವುದಿಲ್ಲ. 'ಇನ್ನರ್ಧ'ದಂತಹ ಕಥೆ ಅಮ್ಮ ಮತ್ತು ಮಗನ ತಾಕಲಾಟಗಳು ಬದುಕಿನ ಮೌಲ್ಯವನ್ನು ತೆರೆದಿಡುತ್ತದೆ. ಇವರ ಕಥೆಗಳಲ್ಲಿ ಪ್ರೀತಿ ಮತ್ತು ಭಾವುಕತೆ ಮಾಗುವ ಹಂತದಲ್ಲಿದೆ ಎಂದು ಹೇಳಬಹುದು. ಆಧುನಿಕತೆಯ ರಿಯಾಲಿಟಿ ಶೋ ಮತು ಜಾತೀಯತೆ ಎದುರುಬದುರುಗೊಂಡಾಗ, ಆಧುನಿಕತೆ ರೂಪಿಸುವ ಇನ್ನೊಂದು ಅಧೀನತೆಗೆ ಇಲ್ಲಿನ ಮುಗ್ಧ ಮನಸ್ಸುಗಳು ಒಳಗಾಗುತ್ತವೆ. ನಗರ ಬದುಕಿನ ಒತ್ತಡಗಳಿಗೆ ಒಗ್ಗಲಾರದ ಪಾತ್ರಗಳನ್ನು ಚಿತ್ರಿಸುವಾಗ, ಸದ್ಯದ ಆಧುನಿಕ ವೇಗದ ಜಗತ್ತಿನಲ್ಲಿ ಭಾವುಕತೆ ಮುಖ್ಯವಾಗುತ್ತದೆ. ಆದರೆ, ಈ ಬಗೆಯ ಕಥೆಗಳನ್ನು ಮತ್ತಷ್ಟು ತೀವ್ರವಾಗಿ ತಂದರೆ ಮಾತ್ರ ಕಾಣ್ಕೆಗೆ ಒಳಪಡಿಸಬಹುದು.

ಪದ್ಮನಾಭರು ಅರಿಯಬೇಕಾದ ವಿಚಾರಗಳಿವೆ. ಪಾತ್ರ ಸೃಷ್ಟಿಯಲ್ಲಿ ಜಯಂತ ಕಾಯ್ಕಿಣಿಯವರ ಪ್ರಭಾವದಿಂದ ಹೊರಬರಬೇಕು; ಮತ್ತು ಸಿದ್ದಿಯರ ಬದುಕು ಇವರ ಕಥೆಗಳಲ್ಲಿ ಕ್ವಚಿತ್ತಾಗಿ ಬರುತ್ತದೆಯೇ ಹೊರತು ವಿಸ್ತಾರವಾಗಿಯಲ್ಲ. ಅಂದರೆ, ಸಾಮಾಜಿಕ ಪ್ರಜ್ಞೆ ಮತ್ತಷ್ಟು ಮಾಗಬೇಕು. ಕುಟುಂಬ ಕೇಂದ್ರವನ್ನು ದಾಟುವ ಕ್ರಿಯೆಯನ್ನು ರೂಢಿಸಿಕೊಳ್ಳುವ ಅಗತ್ಯವಿದೆ. ಮುಂದಿನ ದಿನಗಳಲ್ಲಿ ಈ ಬಗ್ಗೆ ಗಮನಹರಿಸಬಹುದು.

ಬಾಲ್ಯಲೋಕದ ಮೂಲಕ ಬದುಕನ್ನು ಕಾಣುವ ಮಂಜುನಾಯಕ ಚಳ್ಳೂರು ಗಮನ ಸೆಳೆಯುವ ಒಂದಷ್ಟು ಕಥೆಗಳನ್ನು ಕೊಟ್ಟಿದ್ದಾರೆ. ಇವರ ಜೊತೆಗೆ ಅನಿಲ್ ಗುನ್ನಾಪೂರರನ್ನು ಗ್ರಹಿಸಬಹುದು. ಇಬ್ಬರಲ್ಲೂ ಬಾಲ್ಯದ ಚಿತ್ರಗಳು ಬದುಕಿನ ಗಂಭೀರ ಚಿತ್ರಗಳೇ ಆಗಿವೆ. ಮಂಜುನಾಯಕ ಕಥೆಯನ್ನು ಕಟ್ಟುವಾಗ ಸಂಯಮವನ್ನು ಸಾಧಿಸುತ್ತಾರೆ. ಮೊದಲ ಕಥೆಗಳಲ್ಲೇ ಈ ದಾರಿ ದಕ್ಕುವುದು ಕಷ್ಟ. ಬಾಲ್ಯಕ್ಕೆ ಒಳಗಾಗುವ ಕಥೆಗಾರ ಕೇವಲ ನೆನಪುಗಳ ಪ್ರವಾಹದಲ್ಲಿ ಲೀನವಾದರೆ ಬರೀ ವರದಿಗಾರನಾಗಬಹುದು ಇಲ್ಲವೇ ಆತ್ಮಕಥೆಯ ತುಣುಕುಗಳನ್ನು 'ಹೇಳ'ಬಹುದು. ಬಾಲ್ಯಕ್ಕೆ ಒಂದು ಗಾಢವಾದ ತತ್ವವಿರುತ್ತದೆ. ಅದು ಮುಗ್ಧತೆಯಲ್ಲೇ ಅನಾವರಣವಾಗುತ್ತದೆ. ಮುಗ್ಧತೆ ಮತ್ತು ಭಾವುಕಲೋಕ ಮನುಷ್ಯನ ಹಲ ಬಗೆಯ ಸತ್ಯಗಳನ್ನು ಹೊರತರುತ್ತವೆ. ಮಂಜುನಾಯಕ ಭಿನ್ನವಾಗುವುದು ಬಾಲ್ಯದ ಸಿದ್ಧಮಾದರಿಗಳನ್ನು ಕೈಬಿಟ್ಟಿರುವುದರಿಂದ. ಬಾಲ್ಯವನ್ನು ಕಥೆಯಾಗಿಸುವಾಗ ಬರೀ ಆಟಗಳ ನೆನಪುಗಳನ್ನೋ, ಅಥವಾ ಒಂದು ಬಗೆಯ ಸಂಭ್ರಮದ ಗಳಿಗೆಗಳನ್ನೋ ತುರುಕಿದರೆ ಕಥೆಗಾರನನ್ನು ಮಾಹಿತಿ ಮತ್ತು ವಿವರಗಳೆಂಬ ಭೂತಗಳು ಹಂಗಿಸುತ್ತವೆ. 'ಫೂ', 'ಖತಲ್ ರಾತ್ರಿ', 'ತೇರು ಸಾಗಿತಮ್ಮ ನೋಡಿರೆ' ಕಥೆಗಳು ಇವರನ್ನು ನಿರೂಪಣೆಯ ದೃಷ್ಟಿಯಿಂದ ಮತ್ತು ಮನುಷ್ಯ ಜಗತ್ತಿನ ಲೋಕದೃಷ್ಟಿಯಿಂದ ಸ್ವಲ್ಪಕಾಲ ಉಳಿಯುವಂತೆ ಮಾಡಬಲ್ಲವು. ಮೊದಲ ಕಥೆ 'ಫೂ' ಅನೇಕ ಕಾರಣಗಳಿಂದ ಮುಖ್ಯವಾಗಿದೆ. ಅತ್ತೆಯು ತನ್ನ ಒಳಬಾಳಿನ ನೋವನ್ನು ಮರೆಯಲು ಚಂದ್ರನಿಗೆ ತೋರಿಸುವ ಫೂವಿನಲ್ಲಿ ಆಕೆಯ ಜಗತ್ತೇ ಇದೆ. ಚಂದ್ರನ ಒಡನಾಟವಿದ್ದರೂ, ಆಕೆಯ ಕೊನೆ ದುರಂತವಾಗುತ್ತದೆ. ಕುಟುಂಬವೇ ಕೇಂದ್ರವಾದರೂ ಕಥೆ ಹೊರಡಿಸುವ ಮನುಷ್ಯನ ಸತ್ಯಗಳು ಇಲ್ಲಿ ಗರಿಗೆದರಿವೆ. ಒಳಗಿನ ಕ್ರೂರತೆ, ಸ್ವಾರ್ಥ ಮತ್ತು ಸಂಬಂಧಗಳ ತಾಕಲಾಟಗಳು ಬೆಚ್ಚಿಬೀಳಿಸುತ್ತವೆ. ಬದುಕು ಎಂದಿಗೂ ಪೂರ್ಣ ಕ್ರೌರ್ಯವೂ ಅಲ್ಲ, ಸಂಪೂರ್ಣ ಪ್ರೇಮವೂ ಅಲ್ಲ ಎಂಬುದನ್ನು ಅತ್ತೆಯ ಮೂಲಕ ಅರಿಯಬಹುದು. ಮಂಜುನಾಯಕರು ಹಳ್ಳಿಯ ಮೂಲ ಸ್ವರೂಪವನ್ನು ಅರಿಯಲು ಸಾಕಷ್ಟು ಪಳಗಬೇಕು. ಬರೀ ಬಾಲ್ಯಲೋಕ ಬಹುಕಾಲ ಕರೆದೊಯ್ಯಲಾರದು. ಸದ್ಯಕ್ಕೆ ಬಾಲ್ಯವನ್ನು ಪ್ರಾಮಾಣಿಕತೆಯ ಗಟ್ಟಿತನದಿಂದ ನೋಡಬಲ್ಲ ಶಕ್ತಿ ಅವರಿಗಿದೆ.

ಅನಿಲ್ ಗುನ್ನಾಪೂರ ಬಾಲ್ಯದ ಮುಗ್ಧಲೋಕದಿಂದ ಸಾಮರಸ್ಯವನ್ನು ಹುಡುಕಾಡುವ ಕಥೆಗಾರ. ಆದರೆ, ಈ ವಿಧಾನ ಮಾಗುವ ಹಂತದಲ್ಲಿದೆ. 'ಪರಿಮಳ' ಕಥೆಯಲ್ಲಿ ಕೇವಲ ಪಾತ್ರಗಳನ್ನು ವಿವರಿಸುತ್ತಾರೆ. ಹೆಣ್ಣುಜೀವಕ್ಕೆ ಗಹನವಾದ